# 30. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಡುಮಘಟ್ಟ

ಕ್ಷೇತ್ರ ಸಮನ್ವಯಾಧಿಯಾರಿಯಾದ ಶ್ರೀ ರಾಜಶೇಖರ ಆದ ನನ್ನ ಮಗ ವಿಶ್ವಜಿತನಿಗೆ ಎರಡು ವರ್ಷ ತುಂಬಿದ ಸಂದರ್ಭದಲ್ಲಿ ತಂದೆಯಾದ ನನಗೆ ಮೂಲಭೂತ ಪ್ರಶ್ನೆಯೊಂದು ಧುತ್ತನೆ ಎದ್ದು ಗಟ್ಟಿಯಾಗಿ ಕೂತಿದೆ. ಅವನಿಗೆ ಪೂರ್ವ ಪ್ರಾಥಮಿಕ ಶಾಲಾ ವ್ಯಾಸಂಗವನ್ನು ಖಾಸಗಿ ಶಾಲೆಯಲ್ಲಿ ಕೊಡಿಸಬೇಕೋ ಅಥವಾ ಸರ್ಕಾರಿ ಶಾಲೆಯಲ್ಲಿಯೋ ಎಂಬ ಜಿಜ್ಞಾಸೆ. ಭದ್ರಾವತಿ ತಾಲ್ಲೂಕಿನ ಶಾಲೆಗಳನ್ನು ಭೇಟಿ ಮಾಡುವಾಗ ಈ ಜಿಜ್ಞಾಸೆಗೆ ಶಾಶ್ವತ ಪರಿಹಾರವೇನಾದರೂ ಸಿಗುತ್ತದೆಯೇ ಎಂಬ ಹುಡಕಾಟ ನಡೆಸುತ್ತಿರುತ್ತೇನೆ. ಈ ಪ್ರಯತ್ನದಲ್ಲಿ ಅನೇಕ ಹೊಳಹುಗಳು, ಉನ್ನತವಾದ ವ್ಯಕ್ತಿಗಳು, ಅಧ್ಬುತವಾದ ಪ್ರೇರಣೆಗಳು, ಸಶಕ್ತ ಸಾಂಸ್ಥಿಕ ರೂಪಗಳು ಕಾಣ ಸಿಕ್ಕಿವೆ. ಇಂತಹ ಉನ್ನತ ಮಾದರಿಗಳಲ್ಲಿ ಬಹುತೇಕ ಸಾಮಾನ್ಯವಾಗಿ ಕಂಡು ಬಂದಿರುವ ಅಂಶವೆಂದರೆ ಇಲ್ಲೆಲ್ಲಾ ಶಾಲಾ ಶಿಕ್ಷಕರ ಕೂಟವು ಸಮಾನ ಮನಸ್ಕತೆಯಿಂದ ಸಮುದಾಯವನ್ನು ಶಾಲೆಯತ್ತ ಮುಖ ಮಾಡುವಂತೆ ಮಾಡಿರುವುದು. ಸರ್ಕಾರಿ ಶಾಲೆಯ ಸಂದರ್ಭದಲ್ಲಿ ಸಂಪನ್ಮೂಲಗಳ ಕೊರತೆ ಯಾವಾಗಲೂ ಇದ್ದದ್ದೇ. ಎಣ್ಣೆಗಾದರೆ ಬೆಣ್ಣೆಗಿಲ್ಲ, ಬೆಣ್ಣೆಗಾದರೆ ಎಣ್ಣೆಗೆ. ಶಿಕ್ಷಕರು ಏನಾದರೂ ಮಾಡಬೇಕೆಂದರೆ ಇಲಾಖೆಯೊಂದನ್ನೇ ನೆಚ್ಚಿಕೊಂಡು ಕೂತರಾಗುವುದಿಲ್ಲ ಎಂಬ ಸತ್ಯವನ್ನು ಇವರಾಗಲೇ ಮನವರಿಕೆ ಮಾಡಿಕೊಂಡಿದ್ದಾರೆ. ಇಂತಹ ಮಾದರಿಗಳಲ್ಲಿ ಭದ್ರಾವತಿಯಿಂದ ಸುಮಾರು 30 ಕಿ.ಮೀ. ದೂರದ ಗುಡುಮಗಟ್ಟ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಸದಾ ಸ್ಮರಣೀಯ.

ಗುಡಮಗಟ್ಟ ಗ್ರಾಮ ತೋಟಗಳು ಮತ್ತು ಗದ್ದೆಗಳ ಹಸಿರಿನಿಂದ ಆವರಿಸಿದೆ. ಶಾಲೆಯು ಗ್ರಾಮದ ಹೃದಯ ಭಾಗದಲ್ಲಿ ವಿರಾಜಮಾನವಾಗಿದೆ. ಶಾಲೆಯಲ್ಲಿ ಚಂದದ ಮುಖ್ಯ ಶಿಕ್ಷಕರ ಕೊಠಡಿ ಸರಾಗವಾದ ಗಾಳಿ ಬೆಳಕಿರುವ ಕೊಠಡಿಗಳು ಅಚ್ಚುಕಟ್ಟಾದ ಆವರಣ ಮುದ ನೀಡುತ್ತವೆ. ಬೇರೊಂದು ಕಾರ್ಯಕ್ರಮದ ನಿಮಿತ್ತ ಗುಡಮಗಟ್ಟ ಗ್ರಾಮ ಪಂಚಾಯಿತಿಗೆ ಬಂದಿದ್ದ ನಾನು, "ಹೆಚ್ಚು ಸಮಯವಿಲ್ಲ, ನೀವು ಮಾಡಿರುವ ವಿನೂತನವಾದ ಕೆಲಸಗಳೇನಾದರೂ ಇದ್ದರೆ ತೋರಿಸಿ ಸಾಕು" ಎಂದು ಮುಖ್ಯ ಶಿಕ್ಷಕರಿಗೆ ಹೇಳಿದೆ ಅಷ್ಟೇ. ಸುಮಾರು ಮುಕ್ಕಾಲು ಗಂಟೆಯವರೆಗೆ ಗುಡಮಗಟ್ಟದ ಸಹೃದಯ ನಾಗರೀಕರ ಔದಾರ್ಯದ ಪ್ರಾತ್ಯಕ್ಷಿಕೆಯನ್ನು ನೋಡುವ ಭಾಗ್ಯ ನನ್ನದಾಯಿತು.

ಗುಡಮಗಟ್ಟ ನೀರಾವರಿ ಭದ್ರಾ ಜಲಾಶಯದ ಜಲಾನಯನ ಪ್ರದೇಶದ ಪುಟ್ಟ ಚಂದದ ಗ್ರಾಮ. ಅಡಿಕೆ ಬೆಳಗಾರರಾದ ಇಲ್ಲಿನವರು ಸಹಜವಾಗಿಯೇ ಸಿರಿವಂತರು. ಹೆಚ್ಚು ಓದಿಕೊಂಡವರು ಗ್ರಾಮದಲ್ಲಿ ಇರುವರಾದರೂ ಸರ್ಕಾರಿ ನೌಕರಿಗೆ ಹೋಗಿದ್ದು ಕಡಿಮೆ. ತಮ್ಮ ಮಕ್ಕಳು ಹೆಚ್ಚು ಓದಿದ್ದು ಸಾಕು ತೋಟ ನೋಡಿಕೊಂಡಿರಲಿ ಎಂಬ ಭಾವನೆ ಇರಬಹುದೇನೋ. ಇದೇ ಗ್ರಾಮದ ಪಶುವೈದ್ಯರಾದ ಗೆಳೆಯ ರಾಜಶೇಖರ್ ಡಿ ಬಿ ರವರು "ನಮ್ಮೂರಿನಲ್ಲಿ ಸರ್ಕಾರಿ ನೌಕರಿಗೆ ಹೋಗಿರುವವನು ನಾನೊಬ್ಬನೇ, ನೀವು ಗ್ರಾಮದಲ್ಲಿ ಯಾರನ್ನೇ ಕೇಳಿದರೂ ನಮ್ಮ ಮನೆ ತೋರಿಸುತ್ತಾರೆ" ಎಂದಿದ್ದು ಚೆನ್ನಾಗಿ ನೆನಪಿದೆ. ಆದರೆ ಇಲ್ಲಿನವರು ಶಿಕ್ಷಣಾಸಕ್ತರು ಮತ್ತು ಕೊಡುಗೈ ದಾನಿಗಳು ಎಂದು ಮುಖ್ಯ ಶಿಕ್ಷಕರಿಂದ ತಿಳಿಯಿತು. ಶಾಲೆಯ ದಿನನಿತ್ಯದ ಪ್ರಾರ್ಥನೆ ಮತ್ತು ಇತರೆ ಸಮಾರಂಭ, ಹಬ್ಬಗಳಿಗಾಗಿ ಧ್ವನಿವರ್ಧಕದ ಅವಶ್ಯಕತೆಯಿದೆಯೆಂದು ಗುಡುಮಗಟ್ಟೆ ಗ್ರಾಮದ ದ್ಯಾಮಜ್ಜಾರ ರಾಮಣ್ಣರವರಲ್ಲಿ ಶಿಕ್ಷಕರು ಬೇಡಿಕೆಯಿಟ್ಟಾಗ ಹಿಂದೂ ಮುಂದೂ ನೋಡದೆ ಹದಿನಾಲ್ಕು ಸಾವಿರ ರೂಪಾಯಿ ಬೆಲೆಬಾಳುವ 5 ಕೋರ್ ಬ್ರಾಂಡಿನ ಧ್ವನಿವರ್ಧಕವನ್ನು ಅನ್ನು ಉದಾರವಾಗಿ ಕೊಡಿಸಿದ್ದಾರೆ. ಸದರಿ ಧ್ವನಿವರ್ಧಕವನ್ನು ಶಾಲೆಯಲ್ಲಿ ಪ್ರತಿನಿತ್ಯ ಪ್ರಾರ್ಥನೆಯ ವೇಳೆಯಲ್ಲಿ ಮತ್ತು ಇತರ ರಾಷ್ಟ್ರೀಯ ಹಬ್ಬಗಳು, ಸಮಾರಂಭಗಳು ಮತ್ತು ಸಹಪಠ್ಯ ಚಟುವಟಿಕೆಗಳಿಗಾಗಿ ಬಳಸುತ್ತಿದ್ದಾರೆ. ಸದರಿ ಧ್ವನಿವರ್ಧಕವು ಎರಡು ಕಾರ್ಡ್ ಲೆಸ್ ಮೈಕ್ ಗಳನ್ನು ಹೊಂದಿದ್ದು ಬ್ಲೂ ಟೂತ್ ಮೂಲಕವೂ ಕಾರ್ಯ ನಿರ್ವಹಿಸಬಹುದಾಗಿದ್ದು ಶಾಲೆಗೆ ಉಪಯುಕ್ತವಾಗಿದೆ.

ಶಿಕ್ಷಕರು ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ನೀಡಲು ಉತ್ಸುಕರಾಗಿ ಕಂಪ್ಯೂಟರರ್ ಇಲ್ಲದ್ದನ್ನು ಮನಗಂಡ ಗ್ರಾಮಸ್ಥರಾದ ಶ್ರೀ ಕೋವಿ ಹೊನ್ನಪ್ಪ ರವರು ಶಿಕ್ಷಕರ ಕೋರಿಕೆಯಂತೆ ಇಪ್ಪತ್ತೈದು ಸಾವಿರ ರೂಪಾಯಿ ಬೆಲೆಬಾಳುವ ಕಂಪ್ಯೂಟರ್ ಒಂದನ್ನು ಕೊಡಿಸಿದ್ದಾರೆ. ಇತ್ತೀಚೆಗಷ್ಟೇ ಯಾವುದೋ ಒಂದು ಶಾಲೆಗೆ ದಾನಿಗಳು ಎಂಟು

ಕಂಪ್ಯೂಟರುಗಳನ್ನು ಕೊಡಿಸಿದ್ದು, ಶಿಕ್ಷಕರು ಅವುಗಳನ್ನು ಬಳಸಲು ಬಾರದೇ ಜೋಪಾನವಾಗಿ ಒಂದು ವರ್ಷದ ಕಾಲ ಬಳಸದೇ ಬೆಡ್ ಶೀಟೊಂದನ್ನು ಮುಚ್ಚಿ ಇಟ್ಟಿರುವುದನ್ನು ಕೇಳಿ ಆಘಾತಗೊಂಡಿದ್ದೆ. ಆದರೆ ಇಲ್ಲಿನ ಶಿಕ್ಷಕರಾದ ಶ್ರೀಧರ್, ಶ್ರೀ ನಾಗರಾಜ್ ಮತ್ತಿತರರು ಹಾಗೆ ಮಾಡದೇ ಸಮರ್ಪಕವಾಗಿ ಬಳಸುತ್ತಿರುವರು. ಮುಖ್ಯ ಶಿಕ್ಷಕರೂ ಕೂಡಾ ಬಹಳ ಕಾಳಜಿಯಿಂದ ಸ್ಮಾರ್ಟ್ ರೂಂ ಗೆ ನನ್ನನ್ನು ಕರೆದೊಯ್ದು ಅದನ್ನೆಲ್ಲಾ ಪರಿಚಯ ಮಾಡಿಕೊಟ್ಟರು.

ಬರೀ ಕಂಪ್ಯೂಟರ್ ಇದ್ದರೇ ಆಯಿತೇ? ಹಳ್ಳಿಗಾಡಿನಲ್ಲಿ ಆಗಾಗ್ಗೆ ವಿದ್ಯುತ್ ಕೈ ಕೊಡುತ್ತಿರುವುದು ಎಲ್ಲರಿಗೂ ಗೊತ್ತಿರದ ವಿಷಯವೇನಲ್ಲ. ಅದಕ್ಕೂ ಒಂದು ವ್ಯವಸ್ಥೆಯಾಯಿತು. ಗುಡುಮಗಟ್ಟ ಗ್ರಾಮದ ಸಿದ್ದಲಿಂಗಪ್ಪ ಮತ್ತು ಬುದ್ದಿವರಂತರ ಪುಟ್ಟಪ್ಪ ಎಂಬುವವರಿಂದ ಇಪ್ಪತ್ತನಾಲ್ಕು ಸಾವಿರ ರೂಪಾಯಿಗಳ ಯು.ಪಿ.ಎಸ್. ದಾನವೂ ಆಗಿದೆ. ಇದರಿಂದಾಗಿ ಶಿಕ್ಷಕರು ನಿರಂತರವಾಗಿ ಅಡೆತಡೆಯಿಲ್ಲದೇ ಕಂಪ್ಯೂಟರ್ ಬಳಸುವಂತೆ ಅನುಕೂಲವಾಗಿದೆ.

ಬರೀ ಇಷ್ಟಕ್ಕೇ ಸುಮ್ಮನಾಗದೇ ತಮ್ಮ ಸಮುದಾಯದ ಸಹಭಾಗಿತ್ವ ಪಡೆಯುವ ಅಭಿಯಾನವನ್ನು ಮುಂದುವರೆಸಿದ ಶಿಕ್ಷಕರು ಗ್ರಾಮಸ್ಥರ ಮನವೊಲಿಸಿ ಮುವ್ವತ್ತೆರಡು ರೂ ಬೆಲೆಬಾಳುವ ಪ್ರೊಜೆಕ್ಟರೊಂದನ್ನು ದಾನ ಪಡೆಯುವಲ್ಲಿ ಸಫಲರಾದರು. ಕೊಡುವವರಲ್ಲಿ ಪಡೆಯುವವರ ಮೇಲೆ ನಂಬಿಕೆಯಿದ್ದರೆ ಕೊಡುವವರೂ ಕೂಡಾ ಉದಾರಿಗಳಾಗುತ್ತಾರೆ ಎಂಬುದಕ್ಕೆ ಈ ಸರಣಿ ದಾನಗಳು ಸಾಕ್ಷಿ. ಪ್ರೊಜೆಕ್ಟರನ್ನು ಗೋಡೆಯ ಮೇಲೆ ಪ್ರಕ್ಷೇಪಣೆ ಬೀಳುವಂತೆ ಮೌಂಟ್ ಕೂಡಾ ಮಾಡಿಸಲಾಯಿತು. ತನ್ಮೂಲಕವಾಗಿ ಕಷ್ಟಕರವಾದ ಪರಿಕಲ್ಪನೆಗಳನ್ನು ಮಕ್ಕಳಿಗೆ ಅರ್ಥೈಸುವಂತೆ ಮಾಡಲು ಶಿಕ್ಷಕರು ಈ ಸ್ಮಾರ್ಟ್ ರೂಮಿಗೆ ಮಕ್ಕಳನ್ನು ಕರೆದೊಯ್ದು ಅಲ್ಲಿ ಸಾಫ್ಟ್ ಸಂಪನ್ಮೂಲಗಳನ್ನು ಬಳಸಿ ಮಕ್ಕಳು ಸುಲಭವಾಗಿ ಕಲಿಯುವಂತೆ ಮಾಡುತ್ತಿದ್ದಾರೆ. ಅಷ್ಟಕ್ಕೇ ನಿಲ್ಲದ ಗ್ರಾಮಸ್ಥರಾದ ಸಂಜೀವಣ್ಣರ ನಾಗೇಂದ್ರಪ್ಪ ರವರು ಜೆರಾಕ್ಸ್ ಸೌಲಭ್ಯವೂ ಇರುವ ಹದಿನೈದು ಸಾವಿರ ರೂಪಾಯಿ ಬೆಲೆಬಾಳುವ ಪ್ರಿಂಟರನ್ನು ಶಾಲೆಗೆ ಉದಾರವಾಗಿ ಕೊಡಿಸಿದ್ದಾರೆ. ಇದರಿಂದ ಶಿಕ್ಷಕರಿಗೆ ಪ್ರಶ್ನೆಪತ್ರಿಕೆ ಮುದ್ರಣಕ್ಕಾಗಿ, ಕಛೇರಿ ಕೆಲಸ ಮತ್ತು ನಮೂನೆಗಳ ಮುದ್ರಣಕ್ಕಾಗಿ ಹಣ ವೆಚ್ಚ ಮಾಡಿಕೊಂಡು ನಗರಗಳಿಗೆ ಅಲೆಯುವುದು ತಪ್ಪಿದೆ.

ಶ್ರೀ ದ್ಯಾಮಜ್ಜಾರ ತಿಪ್ಪೇಶ್ ಎಂಬ ಸದರಿ ಗ್ರಾಮದ ಗ್ರಾಮಸ್ಥರು ಶಾಲೆಗೆ ಸಂಯುಕ್ತ ಸೂಕ್ಷ್ಮದರ್ಶಕ ಯಂತ್ರ ಮತ್ತಿತರ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕಲಿಕೋಪಕರಣಗಳನ್ನು ಸುಮಾರು ಐದುವರೆ ಸಾವಿರ ರೂಪಾಯಿಗಳ ವೆಚ್ಚದಲ್ಲಿ ದಾನ ರೂಪದಲ್ಲಿ ನೀಡಿದ್ದಾರೆ. ಬೆಂಗಳೂರಿನಲ್ಲಿ ವಾಸವಾಗಿರುವ ಗುಡುಮಗಟ್ಟ ಗ್ರಾಮದ ಲಕ್ಷ್ಮಣಪ್ಪ ಎಂಬುವರು ಪ್ರತೀ ವರ್ಷವೂ ಉಚಿತವಾಗಿ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ಮತ್ತಿತರ ಲೇಖನ ಸಾಮಾಗ್ರಿಗಳನ್ನು ಇಪ್ಪತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಉಚಿತವಾಗಿ ನೀಡುತ್ತಾಬಂದಿದ್ದಾರೆ. ಅಲ್ಲದೇ ಗ್ರಾಮಸ್ಥರು ಶಾಲೆಯ ಸಣ್ಣ ಪುಟ್ಟ ಅಗತ್ಯಗಳನ್ನು ಆಗಾಗ್ಗೆ ಪೂರೈಸುತ್ತಿದ್ದಾರೆ. ಶಾಲೆಗೆ ಭೇಟಿ ನೀಡಿ ಗಮನಿಸಿದಾಗ ಶಾಲೆ ಮತ್ತು ಸಮುದಾಯದ ಸಂಬಂಧವು ಒಂದು ರೀತಿ ಆಪ್ಯಾಯಮಾನವಾಗಿರುವುದು ಕಂಡು ಬರುತ್ತದೆ.

ಶಾಲೆಯು ಬೇರೆಲ್ಲಾ ಸಂಸ್ಥೆಗಳಿಗಿಂತ ಹೆಚ್ಚಾಗಿ ಸಮುದಾಯದ ಸಹಭಾಗಿತ್ವವನ್ನು ಬಯಸುತ್ತದೆ. ಶಾಲೆ ಮತ್ತು ಸಮುದಾಯದ್ದು ಯಾವತ್ತೂ ಕೊಡು ಕೊಳ್ಳುವ ಸಂಪ್ರದಾಯ. ಈ ಸಂಬಂಧದಲ್ಲಿ ಏನಾದರೂ ಸರಿಯಾದ ಸಂವಹನ ಏರ್ಪಡದಿದ್ದರೆ ಇವೆರಡೂ ತಮ್ಮ ತಮ್ಮ ಕರ್ತವ್ಯಗಳಿಂದ ವಿಮುಖವಾಗಿ ಬಿಡುವುವು. ಎರಡೂ ಒಂದರಿಂದ ಮತ್ತೊಂದು ಸಾಕಷ್ಟು ನಿರೀಕ್ಷೆಗಳನ್ನು ಹೊಂದಿರುತ್ತವೆ. ಈ ವಿಷಯದಲ್ಲಿ ಸ.ಹಿ.ಪ್ರಾ.ಶಾಲೆ ಗುಡಮಗಟ್ಟ ಶಿಕ್ಷಕರಿಗೆ ಮತ್ತು ಸಮಾಜದ ಶಿಕ್ಷಕಣಾಸಕ್ತರಿಗೆ ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ.

ಹೀಗೆಯೇ ಒಮ್ಮೆ ಬೇರೊಂದು ಶಾಲೆಗೆ ಭೇಟಿ ನೀಡಿದಾಗ ಸನ್ನಿವೇಶವೊಂದರಲ್ಲಿ ಅಲ್ಲಿನ ಶಿಕ್ಷಕರು "ಈ ಊರು, ಶಾಲೆ ಒಂಥರಾ ದರಿದ್ರ ಸರ್, ಇಂಥ ಮಕ್ಕಳನ್ನು ನಾನೆಲ್ಲೂ ನೋಡಿಲ್ಲ" ಎಂದು ನನಗೆ ಕೇಳುವಂತೆಯೇ ಗೊಣಗುತ್ತಿದ್ದರು. "ನೋಡಿ, ನನ್ನ ಜೀವನದ ಈ ಚಿಕ್ಕ ಅನುಭವದಲ್ಲಿ ಹೇಳುವುದಾದರೆ ಕೆಟ್ಟ ಶಾಲೆ ಮತ್ತು ಕೆಟ್ಟ ಮಕ್ಕಳು ಅಂತ ಎಲ್ಲಿಯೂ ಇರುವುದಿಲ್ಲ. ನಾವು ನೋಡುವ ದೃಷ್ಟಿಕೋನ ಬದಲಾಗಬೇಕಷ್ಟೇ" ಎಂದು ಹೇಳಬೇಕೆನಿಸಿತು. ನನ್ನ ವ್ಯಾಪ್ತಿಯ ಶಾಲೆಯಲ್ಲವಾದ್ದರಿಂದ ಬೇಸರಗೊಂಡು ಅಲ್ಲಿಂದ ಕಾಲ್ಕಿತ್ತಿದ್ದೆ.....





